# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 780 (852) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ(ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 16.12.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:26.08.2015ರಲ್ಲಿನ ಆದೇಶದಂತೆ ಶಾಲಾ ಶಿಕ್ಷಣ ಇಲಾಖೆಯಲ್ಲಿ ಎಷ್ಟು ಬೋಧಕೇತರ ವೃಂದದ ಗ್ರೂಪ್-ಸಿ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ; ಮಂಜೂರಾಗಿರುವ ಹುದ್ದೆಗಳು ಶಿಕ್ಷಣ ಇಲಾಖೆ ಅಥವಾ ರಾಜ್ಯ ಲೆಕ್ಕ ಪತ್ರದ ಇಲಾಖೆಗೆ ಸಂಬಂಧಿಸಿದ ಹುದ್ದೆಗಳೆಂಬುದರ ಬಗ್ಗೆ ಮಾಹಿತಿ ನೀಡುವುದು; ಸದರಿ ಆದೇಶದ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹುದ್ದೆಗಳ ಮಂಜೂರಾತಿ ಉದ್ದೇಶಗಳೇನು: | ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಮಾಹಿತಿ 2014, ದಿನಾಂಕ: 26.08.2015ರಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಡಳಿತ ಕಛೇರಿಗಳಲ್ಲಿ ಅಕೌಂಟ್ಸ್ ಅಧೀಕ್ಷಕರು, ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರು , ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಒಟ್ಟು 716 ಬೋಧಕೇತರ ವೃಂದದ ಗ್ರೂಪ್-ಸಿ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.<br><br>ಸದರಿ ಹುದ್ದೆಗಳ ಪೈಕಿ 72 ಲೆಕ್ಕ ಅಧೀಕ್ಷಕರು ಹಾಗೂ 204 ಪ್ರಥಮ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆಯ ಮೇರೆಗೆ ನೇಮಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಪ್ರಸ್ತುತ ಕೇಂದ್ರ ಹಾಗೂ ರಾಜ್ಯ ವಲಯದ ಹತ್ತು ಹಲವು ಯೋಜನೆಗಳು ಜಾರಿಯಲ್ಲಿದ್ದು, ಶಾಲಾ ಶಿಕ್ಷಣ ಇಲಾಖೆಯ ಸಮಗ್ರ ಶೈಕ್ಷಣಿಕ ಪ್ರಗತಿ ಹಾಗೂ ಸುಗಮ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದು ಹುದ್ದೆಗಳ ಮಂಜೂರಾತಿಯ ಉದ್ದೇಶವಾಗಿದೆ. |
| ಆ) | ಶಿಕ್ಷಣ ಇಲಾಖೆಗೆ ಒಟ್ಟು ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಲೆಕ್ಕಾಧಿಕಾರಿಗಳು, ಅಕೌಂಟ್ಸ್ ಅಧೀಕ್ಷಕರು ಹಾಗೂ ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಎಷ್ಟು; ಮಂಜೂರಾಗಿರುವ ಹುದ್ದೆಗಳಲ್ಲಿ ಶಿಕ್ಷಣ ಇಲಾಖೆ ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸೇರಿದ ಹುದ್ದೆಗಳು ಎಷ್ಟು ಮತ್ತು ಯಾವುವು; ಅವುಗಳನ್ನು ಹೇಗೆ ಗುರುತಿಸಲಾಗಿದೆ; ಗುರುತಿಸಿದ್ದಲ್ಲಿ ಅವುಗಳ ವಿವರಗಳನ್ನು ನೀಡುವುದು; ಗುರುತಿಸದೇ ಇದ್ದಲ್ಲಿ ಕಾರಣಗಳೇನು; ಗುರುತಿಸುವ ಕುರಿತು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು: | ಶಿಕ್ಷಣ ಇಲಾಖೆಗೆ ಒಟ್ಟು ಮಂಜೂರಾಗಿರುವ , ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಲೆಕ್ಕಾಧಿಕಾರಿಗಳು, ಲೆಕ್ಕ ಅಧೀಕ್ಷಕರು ಹಾಗೂ ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ<br><br>ಶಾಲಾ ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿ ಮಾಡಲು ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ದಿನಾಂಕ:15.07.2024ರಂದು ಪ್ರಧಾನ ನಿರ್ದೇಶಕರು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಇವರನ್ನು ಕೋರಲಾಗಿರುತ್ತದೆ. ಸದರಿ ಮಾಹಿತಿಯನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ.<br><br>ಮುಂದುವರೆದು, ಶಾಲಾ ಶಿಕ್ಷಣ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರ ವೃಂದದಿಂದ ಲೆಕ್ಕಾಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |

| | | |
|---|---|---|
| (ಇ) | ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ನೇಮಕಾತಿ ವಿಧಾನದ ಬಗ್ಗೆ ನಿಯಮಗಳು ಇಲ್ಲದಿದ್ದ ಪ್ರಕರಣಗಳಲ್ಲಿ ಕಾರ್ಯಕಾರಿ ಆದೇಶವನ್ನು ಹೊರಡಿಸುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ; ಯಾವ ಹಂತದಲ್ಲಿದೆ: ಯಾವ ದಿನಾಂಕದೊಳಗಾಗಿ ಕಾರ್ಯಕಾರಿ ಆದೇಶ ಹೊರಡಿಸಲಾಗುವುದು ಈ ಕುರಿತು ಸರ್ಕಾರದ ನಿಲುವೇನು;(ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಮಾಹಿತಿ 2014, ದಿನಾಂಕ 26.08.2015ರಲ್ಲಿ ಹುದ್ದೆಗಳ ನೇಮಕಾತಿ /ಭರ್ತಿ ವಿಧಾನದ ಬಗ್ಗೆ ತಿಳಿಸಿರುವುದರಿಂದ, ಕಾರ್ಯಕಾರಿ ಆದೇಶವನ್ನು ಹೊರಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಕಳೆದ ಆರು ವರ್ಷಗಳಿಂದ ಸಮಗ್ರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ತರಲು ಸಾಧ್ಯವಾಗದಿರುವ ಕಾರಣ ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕ ಹುದ್ದೆಯ ನೇಮಕಾತಿ ವಿಧಾನಗಳಿಗೆ ಸಂಬಂಧಿಸಿದಂತೆ ಕಾರ್ಯಕಾರಿ ಆದೇಶ ಹೊರಡಿಸುವ ಕುರಿತು ಸರ್ಕಾರಕ್ಕಿರುವ ತೊಂದರೆಗಳೇನು; ಈ ಕುರಿತು ಸರ್ಕಾರದ ನಿಲುವೇನು;(ಮಾಹಿತಿ ನೀಡುವುದು) | ದಿನಾಂಕ:26.08.2015ರ ಸರ್ಕಾರದ ಆದೇಶದಲ್ಲಿ ಹುದ್ದೆಗಳ ಮಂಜೂರಾತಿ, ಆಯಾ ಹುದ್ದೆಗಳಿಗೆ ಸಂಬಂಧಪಟ್ಟಂತೆ ನೇಮಕಾತಿ ವಿಧಾನಗಳನ್ನು ನಿರ್ದಿಷ್ಟಪಡಿಸಲಾಗಿದೆ.<br><br>ಪ್ರಥಮ ದರ್ಜೆ ಲೆಕ್ಕಸಹಾಯಕ ಹುದ್ದೆಯನ್ನು ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ ತುಂಬ ಬೇಕಾಗಿರುವುದರಿಂದ ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯಕಾರಿ ಆದೇಶ ಹೊರಡಿಸುವ ಕುರಿತು ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ) | ಹುದ್ದೆಗಳು ಮಂಜೂರಾಗಿ ಒಂಭತ್ತು ವರ್ಷಗಳು ಕಳೆದಿದ್ದರೂ ಸಹ ನೇಮಕಾತಿ ವಿಧಾನ ಮತ್ತು ನಿಯಮಗಳನ್ನು ರೂಪಿಸುವಲ್ಲಿ ಸರ್ಕಾರವು ವಿಫಲವಾಗಿರಲು ಕಾರಣಗಳೇನು<br>( ಸಂಪೂರ್ಣ ಮಾಹಿತಿ ನೀಡುವುದು) | ದಿನಾಂಕ:26-08-2015 ರ ಆದೇಶದಲ್ಲಿ ಲೆಕ್ಕಾಧೀಕ್ಷಕರು ಮತ್ತು ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ನೇಮಕಾತಿ ವಿಧಾನ ನಿಗದಿಪಡಿಸಲಾಗಿರುತ್ತದೆ. |

**ಕಡತ ಸಂಖ್ಯೆ: ಇಪಿ 492 ಎಸ್‌ಟಿಬಿ 2024**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಿ3(1) ಎಲ್.ಎಲ್.ಸಿ/780/(852)/40/24 ದಿನಾಂಕ:05.12.2024

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ) ([illegible]) [illegible]
ಚುಕ್ಕೆ ಗುರುತಿನ/ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ: 780(852) ಗೆ ಉತ್ತರ

ಶಿಕ್ಷಣ ಇಲಾಖೆಗೆ ಒಟ್ಟು ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಲೆಕ್ಕಾಧಿಕಾರಿಗಳು, ಅಕೌಂಟ್ಸ್ ಅಧೀಕ್ಷಕರು ಹಾಗೂ ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ವಿವರ

| ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು | | | | ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | | | | ಖಾಲಿ ಇರುವ ಹುದ್ದೆಗಳ ಸಂಖ್ಯೆ | | | |
|---|---|---|---|---|---|---|---|---|---|---|---|---|
| | ಬೆಂಗಳೂರು ಹಾಗೂ ಮೈಸೂರು ವಿಭಾಗ | ಕಲ್ಬುರ್ಗಿ ವಿಭಾಗ | ಧಾರವಾಡ ವಿಭಾಗ | ಒಟ್ಟು | ಬೆಂಗಳೂರು ಹಾಗೂ ಮೈಸೂರು ವಿಭಾಗ | ಕಲ್ಬುರ್ಗಿ ವಿಭಾಗ | ಧಾರವಾಡ ವಿಭಾಗ | ಒಟ್ಟು | ಬೆಂಗಳೂರು ಹಾಗೂ ಮೈಸೂರು ವಿಭಾಗ | ಕಲ್ಬುರ್ಗಿ ವಿಭಾಗ | ಧಾರವಾಡ ವಿಭಾಗ | ಒಟ್ಟು |
| ಲೆಕ್ಕಾಧಿಕಾರಿಗಳು | 5 | 1 | 1 | 7 | 3 | 1 | 1 | 5 | 2 | 0 | 0 | 2 |
| ಅಕೌಂಟ್ಸ್ ಅಧೀಕ್ಷಕರು | 72 | 25 | 29 | 126 | 54 | 13 | 17 | 84 | 18 | 12 | 12 | 42 |
| ಅಕೌಂಟ್ಸ್ ಪ್ರಥಮ ದರ್ಜೆ ಸಹಾಯಕರು | 112 | 34 | 59 | 205 | 14 | 0 | 14 | 28 | 98 | 34 | 45 | 177 |

ವಿಜಯ ಈ ರವಿಕುಮಾರ್, ಕೆ.ಎ.ಎಸ್
ಜಂಟಿ ನಿರ್ದೇಶಕರು. (ಆಡಳಿತ)

ಅನುಬಂಧ-೨

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ದಿನಾಂಕ: 15-07-2024

ಸಂಖ್ಯೆ: ಸಿ5(6) ಕೆ.ಎ.ಟಿ/902/2024

ರವಾನಿಸಿದೆ
..........
ದಿನಾಂಕ 19/7/24

ರವರಿಗೆ,
ಪ್ರಧಾನ ನಿರ್ದೇಶಕರು,
ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ,
ಟಿಟಿಎಂ ಸಿ ಕಟ್ಟಡ, ಎ ಬ್ಲಾಕ್,
3ನೇ ಮಹಡಿ, ಬಿ.ಎಂ.ಟಿ.ಸಿ, ಶಾಂತಿನಗರ
ಬೆಂಗಳೂರು -560027

(4)

ಮಾನ್ಯರೆ,

ವಿಷಯ: ಶಾಲಾ ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1 ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಇದರ ಅರ್ಜಿ ಸಂಖ್ಯೆ 902-904/2024 ರ ತೀರ್ಪು ದಿನಾಂಕ: 28-06-2024.

* * * * *

ವಿಷಯದನ್ವಯ ಶಾಲಾ ಶಿಕ್ಷಣ ಇಲಾಖೆಯ ಶ್ರೀ. ಜಿ. ಎಸ್. ಪ್ರಶಾಂತ, ಪ್ರದಸ, ಶ್ರೀ. ಚಂದ್ರಕುಮಾರ್, ಪ್ರದಸ ಮತ್ತು ಶ್ರೀ. ಶಾಂತಬಾಬು ಎಲ್, ಪ್ರದಸ ಎಂಬುವವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ದಾವೆ ಸಂಖ್ಯೆ 902-904/2024 ರಂತೆ ದಾವೆಯನ್ನು ಹೂಡಿ ಅದರಲ್ಲಿ ಆರ್ಥಿಕ ಇಲಾಖೆಯಿಂದ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ ಆಇ 216 ರಾಲೆಪ 2023 ದಿನಾಂಕ: 15-09-2023ನ್ನು ರದ್ದುಪಡಿಸಲು ಹಾಗೂ ಶಾಲಾ ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಲೆಕ್ಕಾದೀಕ್ಷಕರ ಹುದ್ದೆಗೆ ಇಲಾಖಾ ನೌಕರರಿಂದಲೇ ಮುಂಬಡ್ತಿ ನೀಡಿ ಭರ್ತಿಮಾಡಲು ಕೋರಿ ಅರ್ಜಿಸಲ್ಲಿಸಿರುತ್ತಾರೆ.

ಸದರಿ ಅರ್ಜಿಯ ಮೇಲೆ ನ್ಯಾಯಮಂಡಳಿಯು ವಿಚಾರಣೆ ನಡೆಸಿ ದಿನಾಂಕ: 28-06-2024 ರಂದು ನೀಡಿದ ತೀರ್ಪಿನಲ್ಲಿ ಅರ್ಜಿ ವಜಾಗೊಳಿಸಿದೆ ಹಾಗೂ ತೀರ್ಪಿನಲ್ಲಿ ಖಾಲಿ ಇರುವ ಲೆಕ್ಕಾಧೀಕ್ಷಕರ ಹುದ್ದೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಅಭಿಪ್ರಾಯವನ್ನು ನೀಡಲಾಗಿದೆ.

**Suffice to say that even under the extant C&R rules, there can be *no direction* to fill up all the vacant posts in terms of the C&R rules which is a matter of exercise of disretion by Appointing Authority. We can only state that public posts are created because they serve a public purpose and hence deeping them vacant for a long time does not serve public interest and also good governance and we are hopeful that the State and the particularly the Appointing Authority are mindful of this aspect.**

ಮೇಲಿನ ನ್ಯಾಯಮಂಡಳಿಯ ಅಭಿಪ್ರಾಯದಂತೆ ಈ ಹುದ್ದೆಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದ್ದು, ಈ ಹಿನ್ನಲೆಯಲ್ಲಿ ಅವುಗಳನ್ನು ದೀರ್ಘಕಾಲದವರೆಗೆ ಖಾಲಿ ಇಡುವುದು ಸೂಕ್ತವಲ್ಲ ಈ ಹುದ್ದೆಗಳನ್ನು ತುಂಬಿದಲ್ಲಿ

ಸಾರ್ವಜನಿಕ ಹಿತಾಸಕ್ತಿ ಮತ್ತು ಉತ್ತಮ ಆಡಳಿತವನ್ನು ಪೂರೈಸುತ್ತವೆ. ಈ ಬಗ್ಗೆ ನೇಮಕಾತಿ ಪ್ರಾಧಿಕಾರಿಗಳು ಈ ಅಂಶವನ್ನು ಪರಿಗಣಿಸ ಬೇಕು ಎಂದು ತಿಳಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ (ಬೆಂಗಳೂರು ಮತ್ತು ಮೈಸೂರು ವಿಭಾಗ) ವ್ಯಾಪ್ತಿಯ ಕಛೇರಿಗಳಲ್ಲಿ ಮಂಜೂರಾದ ಒಟ್ಟು 72 ಲೆಕ್ಕಾಧೀಕ್ಷಕರ ಹುದ್ದೆಗಳಲ್ಲಿ ನಿಯಮದಂತೆ ಶೇ. 50 ಅಂದರೆ 36 ಹುದ್ದೆಯನ್ನು ಇಲಾಖೆಯ ಅರ್ಹ ಪ್ರಥಮ ದರ್ಜೆ ಸಹಾಯಕರಿಗೆ ಬಡ್ತಿ ನೀಡುವ ಮೂಲಕ ಭರ್ತಿ ಮಾಡಿದ್ದು, ಉಳಿದ 36 ಹುದ್ದೆಗಳ ಪೈಕಿ 11 ನೌಕರರು ತಮ್ಮ ಇಲಾಖೆಯಿಂದ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದು, ಉಳಿದ 25 ಹುದ್ದೆಗಳು ಕೆಲವು ವರ್ಷದಿಂದ ಖಾಲಿ ಇದ್ದು, ಈ ಹುದ್ದೆಗಳನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಭರ್ತಿಮಾಡಬೇಕಾಗಿರುತ್ತದೆ.

ನ್ಯಾಯಮಂಡಳಿಯ ತೀರ್ಪಿನ ಪ್ರತಿಯನ್ನು ಈ ಪತ್ರಕ್ಕೆ ಅನುಬಂಧಿಸಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಗೆ ಮೀಸಲಿರಿಸಿದ 25 ಲೆಕ್ಕಾಧೀಕ್ಷರ ಹುದ್ದೆಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಶೀಘ್ರವಾಗಿ ಭರ್ತಿ ಮಾಡಲು ಕ್ರಮವಹಿಸಲು ಕೋರಿದೆ.

(ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ನಂಬುಗೆಯ

ವಿಜಯ ಈ ರವಿಕುಮಾರ್.,ಕೆ.ಆ.ಸೇ.,
ಜಂಟಿ ನಿರ್ದೇಶಕರು (ಆಡಳಿತ)

**ಪ್ರತಿಯನ್ನು**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು-560001. ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರಿ ವಕೀಲರು ಕರ್ನಾಟಕ ಆಡಳಿತ ನ್ಯಾಯಮಂಡಳಿ, 4ನೇ ಮಹಡಿ ಕಂದಾಯ ಭವನ, ಕೆ ಜಿ ರಸ್ತೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಮೇಲಿನ ಅಂಶಗಳನ್ನು ಮಾನ್ಯ ನ್ಯಾಯಮಂಡಳಿಯ ಗಮನಕ್ಕೆ ತರಲು ಕೋರಿದೆ.
4. ಕಛೇರಿ ಪ್ರತಿ.